**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 17.06.2026**

**ಪಾಟೀ ಸವಾಲುಃ 2 ಎ ಪ್ರತಿವಾದಿ ಪರ ಶ್ರೀ ಹೆಚ್ ಸಿ ಎಂ ಕೆ ವಕೀಲರಿಂದ**

1. ನಾನು ಸದರಿ ದಾವೆಯಲ್ಲಿ ಮುಂಚೆ ವಾದಿಯಾಗಿದ್ದೆ ಎಂದರೆ ಸರಿ . ನಾನು ವಾದಿಯಾಗಿದ್ದಾಗ ನ್ಯಾಯಾಲಯಕ್ಕೆ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ . ಆ ಸಮಯದಲ್ಲಿ 2 ನೆ ಪ್ರತಿವಾದಿ ನನ್ನನ್ನು ಪಾಟಿ ಸವಾಲು ಮಾಡಿದ್ದರು ಎಂದರೆ ಸರಿ . ಈ ಹಿಂದೆ ನನ್ನನ್ನು 2 ನೆ ಪ್ರತಿವಾದಿಯವರು ಪಾಟಿ ಸವಾಲು ಮಾಡಿದ್ದಾಗ ಆ ಸಮಯದ ಮಟ್ಟಿಗೆ ಆ ಪಾಟಿ ಸವಾಲು ಸರಿಯಾಗಿರುತ್ತದೆ . ಒ ಎಸ್ 166/14 ರಲ್ಲಿ ಸಲ್ಲಿಸಿರುವ ವಾದ ಪತ್ರಕ್ಕೆ ನಾನೆ ಸಹಿ ಹಾಕಿರುತ್ತೇನೆ. ದಾವಾಸ್ವತ್ತಿನ ಪೈಕಿ 30 *40 ವಿಸ್ತೀರ್ಣದಲ್ಲಿ ಸಹಕಾರ ಸಂಘದವರು ಸ್ವಾದೀನದಲ್ಲಿರುತ್ತಾರೆ ಎಂದರೆ ಸರಿ . ಸದರಿ ಸಹಕಾರ ಸಂಘವು ಸ್ಥಳೀಯ ರೈತರಿಂದ ಹಾಲು ಸಂಗ್ರಹಿಸಿ ಮುಖ್ಯ ಡೈರಿಗೆ ಸರಬರಾಜು ಮಾಡುತ್ತಾರೆ ಎಂದರೆ ಸಾಕ್ಷಿಯು ಊರಿನವರು ಯಾರು ಸದರಿ ಸಹಕಾರ ಸಂಘಕ್ಕೆ ಹಾಲನ್ನು ಹಾಕುತ್ತಿರುವುದಿಲ್ಲ ಕೆಲವರು ಮಾತ್ರ ಹಾಕುತ್ತಾರೆ ಎಂದು ನುಡಿದರು.

2. ಸದರಿ ಸಂಘ ಸಾರ್ವಜನಿಕರ ಬಳಕೆಗೆ ಉಪಯೋಗಿಸಲ್ಪಟ್ಟ ಸಂಘ ಎಂದರೆ ಗೊತ್ತಿಲ್ಲ. ಸದರಿ ಕಟ್ಟಡ ಸರಕಾರದಿಂದ ಅನುದಾನ ಪಡೆದ ಕಟ್ಟಡ ಎಂದರೆ ಗೊತ್ತಿಲ್ಲ. ಹಾಲಿ ಕಟ್ಟಡ ನಿರ್ಮಾಣ ಮಾಡುವ ಮುಂಚೆ ಹಂಚಿನ ಕಟ್ಟಡ ಇತ್ತು ಎಂದರೆ ಗೊತ್ತಿಲ್ಲ. 1988 ರಲ್ಲಿ ನಮ್ಮ ತಾತ ಸದರಿ ಜಾಗವನ್ನು ಸಂಘಕ್ಕೆ ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕಟ್ಟಡದ ಜಾಗ 30*40 ಅಡಿ

ವಿಸ್ತೀರ್ಣ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಕಟ್ಟಡ ನನಗೆ ಸಂಬಂದಟಪ್ಟ ಸರ್ವೆ ನಂಬರಲ್ಲಿ ಇರುತ್ತದೆ ಎಂದು ನುಡಿದರು.

3. ನನ್ನ ಹೆಸರಿಗೆ ದಾನ ಪತ್ರ ನೊಂದಣಿ ಆಗುವ ಸಮಯದಲ್ಲಿ ಸಂಘ ದ ಕಟ್ಟಡ ಇದ್ದು ಸಂಘ ದವರು ಅದರ ಸ್ವಾದೀನದಲ್ಲಿದ್ದರು ಎಂದರೆ ಸಾಕ್ಷಿಯು ಕಟ್ಟಡ ಇದ್ದು ಅದು ಸಂಘ ದ ಕಟ್ಟಡ ಎಂದು ನನಗೆ ಗೊತ್ತಿಲ್ಲ ಎಂದು ನುಡಿದರು. 30*40 ಅಡಿ ವಿಸ್ತೀರ್ಣದ ಜಾಗ ಸಂಘ ದ ಸ್ವಾದೀನದಲ್ಲಿದ್ದು ಅದನ್ನು ಬಿಡಿಸಿಕೊಡಿ ಎಂದು ದಾವೆಯನ್ನು ಹೂಡಿದ್ದೀರಾ ಎಂದರೆ ಸಾಕ್ಷಿಯು ಅಂದಿನ ಸ್ತಿತಿಗೆ ಅದು ಪಿತ್ರಾರ್ಜಿತ ಆಸ್ತಿ ನಮಗೆ ಬಿಡಿಸಿಕೊಡಿ ಎಂದು ಪೂರ್ತಿ ಸರ್ವೆ ನಂಬರ ಜಾಗಕ್ಕೆ ಕೇಸು ಹಾಕಿರುತ್ತೇವೆ ಎಂದು ನುಡಿದರು. ನಿಖರವಾಗಿ ಸಂಘ ದವರ ಮೇಲೆ 30*40 ಅಡಿ ವಿಸ್ತೀರ್ಣದ ಜಾಗವನ್ನು ಬಿಡಿಸಿಕೊಡಿ ಎಂದು ದಾವೆಯನ್ನು ಹೂಡಿದ್ದೀರಾ ಎಂದರೆ ಸಾಕ್ಷಿಯು ಹೂಡಿದ್ದೇವೆ ಎಂದು ನುಡಿದರು. ಈ ಬಗ್ಗೆ ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಸಂಘದ ಜಾಗವನ್ನು ಬಿಡಿಸಿಕೊಡಿ ಎಂದು ತೋರಿಸಿದ್ದೀರಾ ಎಂದರೆ ಸಾಕ್ಷಿಯು ಸಂಘದ ಜಾಗಕ್ಕೆ ಯಾವುದೆ ನೊಂದಣಿಯಾಗಿಲ್ಲದ ಕಾರಣ ಅದಕ್ಕೆ ಹೊಂದಿಕೊಂಡಿರುವ ಪೂರ್ತಿ ಸರ್ವೆ ನಂಬರ ಜಾಗವನ್ನು ಬಿಡಿಸಿಕೊಡಿ ಎಂದು ಹಾಕಿದ್ದೇವೆ ಎಂದು ನುಡಿದರು.

4. ಸದರಿ ಸಂಘ 1988 ರಿಂದ ಸ್ವಾದೀನದಲ್ಲಿದ್ದು ನನ್ನ ತಾತ ದಾನ ಪತ್ರ ಮಾಡಿಕೊಟ್ಟಿರುವ ನಮಗೆ ತಕರಾರು ಎತ್ತಲು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ನನ್ನ ತಂದೆ ದಾನ ಪತ್ರ ಮಾಡಿಕೊಡುವ ಸಮಯದಲ್ಲಿ ಸಂಘ ದವರು

ಸ್ವಾದೀನದಲ್ಲಿರುವಷ್ಟು ಜಾಗ ನನಗೆ ವರ್ಗಾವಣೆ ಯಾಗದ ಕಾರಣ ನನಗೆ ದಾನ ಪತ್ರದ ಮುಖಾಂತರ ಸದರಿ ಜಾಗದ ಮೇಲೆ ಯಾವುದೆ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ನನಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/–

ಪ್ರ ದ ನ್ಯಾದಂ, ಕುಶಾಲನಗರ